**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಎಸ್.ಸಿ 6/2020**

**ದಿನಾಂಕಃ 10.09.2024.**

**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 8 (ಚಾ.ಸಾ. 6)**

| | | |
|---|---|---|
| **ಹೆಸರು** | ಃ | **ಮರಿಯಪ್ಪನಾಯ್ಕ** |
| **ತಂದೆಯ ಹೆಸರು** | ಃ | **ಲಕ್ಕನಾಯ್ಕ** |
| **ವಯಸ್ಸು** | ಃ | **30 ವರ್ಷ** |
| **ಉದ್ಯೋಗ** | ಃ | **ವ್ಯವಸಾಯ** |
| **ವಾಸ ಸ್ಥಳ** | ಃ | **ಕುಣಿಗಲ್** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನಿಪಿ.11 ನ್ನು ತೋರಿಸಲಾಗಿ ಅದರಲ್ಲಿ ಅವರ ರುಜುವನ್ನು ಗುರುತಿಸಿದ್ದು, ಆ ರುಜುವನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು. ಆ ರುಜುವನ್ನು ನಾನು ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಆ ದಿವಸ ವಿಕ್ಟೋರಿಯಾ ಆಸ್ಪತ್ರೆಯಿಂದ ಕಳುಹಿಸಿಕೊಟ್ಟ 5 ಬಾಟಲುಗಳನ್ನು ಪೊಲೀಸರು ನನಗೆ ತೋರಿಸಿದರು ಮತ್ತು ಅವುಗಳನ್ನು ವಶಪಡಿಸಿಕೊಂಡರು. ಆ ಬಾಟಲುಗಳಲ್ಲಿ ಹತ್ತಿಗಳು ಇವೆ. ದಿಃ04.08.2019 ರಂದು ಆ ಬಾಟಲುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಸಾಕ್ಷಿಯು ಆ 5 ಬಾಟಲುಗಳನ್ನು ಗುರುತಿಸಿದ್ದು, ಅವುಗಳನ್ನು ಮು.ಮಾ.14 ರಿಂದ 18 ಎಂದು ಗುರುತಿಸಲಾಯಿತು.

2. ಸಾಕ್ಷಿಗೆ ನಿಪಿ.6 ನ್ನು ತೋರಿಸಲಾಗಿ ಅದರಲ್ಲಿ ಅವರ ರುಜುವನ್ನು ಗುರುತಿಸಿದ್ದು, ಆ ರುಜುವನ್ನು ನಿಪಿ.6(ಸಿ) ಎಂದು ಗುರುತಿಸಲಾಯಿತು. ಆ ರುಜುವನ್ನು ನಾನು ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ನನಗೆ ಕುಮಾರ್ ಗೊತ್ತು. ಅವರಿಗೆ ಏಟಾಗಿತ್ತು, ಅವರ ಬಟ್ಟೆಗಳು ರಕ್ತವಾಗಿದ್ದವು. ಆ ಬಟ್ಟೆಗಳನ್ನು ಪೊಲೀಸರು ಪೊಲೀಸ್ ಠಾಣೆಯಲ್ಲಿ ನನ್ನ ಸಮಕ್ಷಮದಲ್ಲಿ ವಶಪಡಿಸಿಕೊಂಡಿದ್ದಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದೆ

ಇರುವ ಟಿ ಶರ್ಟ್ ಮತ್ತು ಅಂಡರ್ ವೇರನ್ನು ತೋರಿಸಲಾಗಿ ಅವುಗಳನ್ನೇ ವಶಪಡಿಸಿಕೊಂಡಿರುವುದು ಎಂದು ಗುರುತಿಸಿದ್ದಾರೆ, ಆ ಬಟ್ಟೆಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**

**3.** ಮು.ಮಾ.1 ಮತ್ತು 2 ನ್ನು ಕುಮಾರನ ಸಹೋದರ ಪ್ರಕಾಶ್ ಪೊಲೀಸ್ ಠಾಣೆಯಲ್ಲಿ ಪೊಲೀಸರಿಗೆ ಕೊಟ್ಟರು ಎಂದರೆ ಸರಿ. ನಿಪಿ.6ನ್ನು ದಿಃ05.08.2019 ರಂದು ಪೊಲೀಸರು ಸಂಜೆ 06.00 ರಿಂದ 06.45 ಗಂಟೆಯವರೆಗೆ ಠಾಣೆಯಲ್ಲಿ ಮಾಡಿದ್ದಾರೆ ಎಂದರೆ ಸರಿ. ಮು.ಮಾ.14 ರಿಂದ 18 ನ್ನು ಹೆಚ್.ಸಿ.ಗೋವಿಂದರಾಜು ಎನ್ನುವವರು ಆಸ್ಪತ್ರೆಯಿಂದ ತಂದಿದ್ದು, ಅವುಗಳನ್ನು ಅವರು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿದರು ಎಂದರೆ ಸರಿ. ಮು.ಮಾ.14 ರಿಂದ 18 ರಲ್ಲಿರುವ ವಸ್ತುವು ಆರೋಪಿ ಚಂದ್ರಯ್ಯನವರಿಗೆ ಸಂಬಂಧಪಟ್ಟ ಹತ್ತಿಗಳು ಎಂದರೆ ಸರಿ.

**(ಆರೋಪಿ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ ಪಾಟೀ ಸವಾಲನ್ನು ಸಾಕ್ಷಿಗೆ 300/- ರೂ.ಗಳ ಖರ್ಚನ್ನು ಕೊಡಬೇಕೆಂಬ ಷರತ್ತನ್ನು ವಿಧಿಸಿ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ.ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**4.**

**5.**

**6.**

**ವಾಟೀ ಸವಾಲುಃ ಆರೋಪಿ ಪರ ಶ್ರೀ. ., ವಕೀಲರಿಂದಃ**

**4.**

**5.**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ವಿ.ರೇಣುಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ವಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)

<u>ವಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ</u>